ಲೈಸೆನ್ಸ್‌ಗಳನ್ನು ನೀಡಲಾಗಿದೆ.

3) ಒಟ್ಟು 67 ಸಿಎಲ್-2 ಲೈಸೆನ್ಸ್ ಅರ್ಜಿಗಳು ಹಾಗೂ 27 ಸಿಎಲ್-9 ಲೈಸೆನ್ಸ್ ಅರ್ಜಿಗಳು ಬಾಕಿ ಉಳಿದಿರುತ್ತೆ. ಸಿಎಲ್-2 ಲೈಸೆನ್ಸ್‌ಗಳ ಕೋಟಾ ಮುಗಿದಿರುವ ಕಾರಣ ಹಾಗೂ ಸಿಎಲ್-9 ಲೈಸೆನ್ಸ್ ನೀಡಲು ನಿಷೇಧ ಆಜ್ಞೆ ಇರುವ ಕಾರಣದಿಂದ ಈ ಅರ್ಜಿಗಳು ಬಾಕಿ ಉಳಿದಿರುತ್ತದೆ.

4) ಅರ್ಜಿಗಳನ್ನು ಕಾನೂನು ರೀತಿಯಿಂದ ಪರಿಶೀಲಿಸಿ ಅವಶ್ಯಕತೆ ಕಂಡುಬಂದಲ್ಲಿ ಹೊಸ ಲೈಸೆನ್ಸ್ ನೀಡಲಾಗುವುದು. ಅಥವಾ ಲೈಸೆನ್ಸ್ ಮಂಜೂರಾಗದೇ ಇದ್ದ ಪಕ್ಷದಲ್ಲಿ 'ಅರ್ಜಿದಾರರು ಸರ್ಕಾರಕ್ಕೆ ಸಂದಾಯ ಮಾಡಿರುವ ಹಣವನ್ನು ಹಿಂದಿರುಗಿಸಲಾಗುವುದು.

ಸಾರಾಯಿ ಕುಡಿತದ ದುಷ್ಪರಿಣಾಮದ ಕುರಿತು.

60 (189) ಶ್ರೀ ಎ.ಟಿ. ರಾಮಸ್ವಾಮಿ (ಆರಕಲಗೂಡು)

ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಾಲಿ ಸರಬರಾಜು ಆಗುತ್ತಿರುವ ಸಾರಾಯಿಯು ಪ್ರಾಣಕ್ಕೆ ತುಂಬಾ ಅಪಾಯಕಾರಿಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಆ ಬಹುತೇಕ ಸಾರಾಯಿ ಪಾಕೆಟ್‌ಗಳಲ್ಲಿಯೇ ಮಾರಾಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಸಾರಾಯಿ ಮಾರಾಟವನ್ನು ಹೆಚ್ಚಿಸಬೇಕೆಂದು ಅನಧಿಕೃತ ಅಂಗಡಿಗಳನ್ನು ಪ್ರೋತ್ಸಾಹಿಸುತ್ತಿರುವುದು ನಿಜವೇ;

ಈ) ಧಾರ್ಮಿಕ, ಶೈಕ್ಷಣಿಕ, ಸಾರ್ವಜನಿಕ ಮತ್ತು ವಾಸಸ್ಥಳಗಳ ಪಕ್ಕದಲ್ಲಿಯೇ ಸಾರಾಯಿ ಅಂಗಡಿ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಉ) ಬಂದಿದ್ದಲ್ಲಿ ಈ ಲೋಪದೋಷಗಳ ನಿವಾರಣೆಗೆ ಸರ್ಕಾರ ತೆಗೆದುಕೊಂಡ ಕ್ರಮ ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯ ಮಂತ್ರಿಗಳು):-

ಅ) ಇಲ್ಲ

ಆ) ಇಲ್ಲ

ಇ) ಇಲ್ಲ

ಈ) ಹೌದು

ಉ) ಗಮನಕ್ಕೆ ಬಂದಂತಹ ಅಂಗಡಿಗಳನ್ನು ಆಕ್ಷೇಪಣಾರಹಿತ ಸ್ಥಳಕ್ಕೆ ಸ್ಥಳಾಂತರಿಸಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತದೆ ಹಾಗೂ ಈ ಬಗ್ಗೆ ಆಗ್ಗಿಂದಾಗ್ಗೆ ಅಬಕಾರಿ ಜಿಲ್ಲಾಧಿಕಾರಿಗಳಿಗೆ ಸೂಕ್ತ ಆದೇಶಗಳನ್ನು ಸಹನೀಡಲಾಗುತ್ತದೆ.

ಕನ್ನಡ ಅಭಿವೃದ್ಧಿ ಪ್ರಾಧಿಕಾರ

61 (192) ಶ್ರೀ ರಾಮಲಿಂಗಾರೆಡ್ಡಿ (ಜಯನಗರ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಎಂದಿನಿಂದ ಪ್ರಾರಂಭವಾಗಿದೆ;

2) 1992ರ ನವೆಂಬರ್‌ವರೆಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ವೇತನ, ಪ್ರವಾಸಭತ್ಯೆ, ದಿನಭತ್ಯೆ ಮತ್ತು ಸಿಬ್ಬಂದಿ ವೇತನ ಮತ್ತು ಸದಸ್ಯರ ಪ್ರವಾಸಭತ್ಯೆ, ದಿನಭತ್ಯೆಗಳಿಗಾಗಿ ವೆಚ್ಚ ಮಾಡಲಾದ ಮೊತ್ತವೆಷ್ಟು;

3) ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಪ್ರಾರಂಭವಾದಂದಿನಿಂದ 1992ರ ನವೆಂಬರ್‌ರವರೆಗೆ ದೂರವಾಣಿ ಮತ್ತು ಪೆಟ್ರೋಲಿಗಾಗಿ ಖರ್ಚು ಮಾಡಲಾದ ಮೊತ್ತವೆಷ್ಟು;

4) ಪ್ರಾಧಿಕಾರವನ್ನು ರದ್ದುಗೊಳಿಸಿ, ಅದರ ಕೆಲಸವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ವಹಿಸುವ ಬಗ್ಗೆ ಪ್ರಸ್ತಾವನೆ ಮಂಡಿಸಲಾಗಿದೆಯೇ ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯ ಮಂತ್ರಿಗಳು):-

1) ದಿನಾಂಕ. 6.2.1992ರಿಂದ

2) ರೂ. 1,90,310-00

3) 1) ದೂರವಾಣಿ ರೂ. 6,740-00ಗಳು

2) ಪೆಟ್ರೋಲ್ ಮುಂಗಡ ಹಣ ರೂ. 10,100-00ಗಳು

4) ಇಲ್ಲ

ರಾಜ್ಯದಲ್ಲಿ ಹಾಲಿ ಸೇವೆ ಸಲ್ಲಿಸುತ್ತಿರುವ ಕೆ.ಎ.ಎಸ್. ಅಧಿಕಾರಿಗಳ ಸಂಖ್ಯೆ.

62 (190) ಶ್ರೀ ರಾಮಲಿಂಗಾರೆಡ್ಡಿ (ಜಯನಗರ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಹಾಲಿ ಸೇವೆ ಸಲ್ಲಿಸುತ್ತಿರುವ ಕೆ.ಎ.ಎಸ್. ಅಧಿಕಾರಿಗಳ ಸಂಖ್ಯೆ ಎಷ್ಟು;

ಆ) ಈ ಪೈಕಿ ಬೆಂಗಳೂರಿನಲ್ಲಿ ವಾಸದ ಮನೆ ಹೊಂದಿರುವವರ ಸಂಖ್ಯೆ ಎಷ್ಟು;

(ಹೆಸರುಗಳು ಮತ್ತು ಪೂರ್ಣ ವಿವರಗಳನ್ನು ಲಗತ್ತಿಸುವುದು)

ಇ) ತಮ್ಮ ಮನೆಗಳನ್ನು ಬಾಡಿಗೆಗೆ ನೀಡಿರುವವರ ಸಂಖ್ಯೆ ಎಷ್ಟು;

ಈ) ಪ್ರತಿ ವರ್ಷ ಪಡೆಯುತ್ತಿರುವ ಬಾಡಿಗೆ ಮೊಬಲಗೇನು;

ಉ) ಹೀಗೆ ಪಡೆದ ಬಾಡಿಗೆಯನ್ನು ಅವರುಗಳ ವರಮಾನ ತೆರಿಗೆ ನಿರ್ಧಾರಣೆಯ ಸಂದರ್ಭದಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆಯೇ ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯ ಮಂತ್ರಿಗಳು)

ಅ) ಕೆ.ಎ.ಎಸ್. (ಸಮೂಹ – ಎ) .

ಕಿರಿಯ ಶ್ರೇಣಿ	ಹಿರಿಯ ಶ್ರೇಣಿ
291	149

ಒಟ್ಟು – 440